ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ಮೂರನೇ ಅಧಿವೇಶನ

## ಸೋಮವಾರ, ದಿನಾಂಕ: ೧೫ನೇ ಜುಲೈ, ೨೦೨೪

---

### ಸಮೂಹ – I

೧. ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು

೨. ಇಂಧನ ಸಚಿವರು

೩. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

೪. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

೫. ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು

೬. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

೭. ಉನ್ನತ ಶಿಕ್ಷಣ ಸಚಿವರು

---

### ಹೊಸ ಪಡಿತರ ಚೀಟಿ ವಿತರಣೆ ಸ್ಥಗಿತವಾಗಿರುವ ಕುರಿತು

**ಶ್ರೀ ಪ್ರತಾಪ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೧ (೧೩೬) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಸಾವಿರಾರು ಮಂದಿ ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿ ಹಲವಾರು ತಿಂಗಳುಗಳೇ ಕಳೆದಿದ್ದರೂ ಹೊಸ ಪಡಿತರ ಚೀಟಿ ಇದುವರೆವಿಗೂ ಅವರಿಗೆ ಲಭ್ಯವಾಗದೇ ಇರುವುದರಿಂದ ಅರ್ಜಿದಾರರಿಗೆ ಸಾಕಷ್ಟು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಹೊಸ ಪಡಿತರ ಚೀಟಿ ಇದುವರೆಗೂ ಅವರಿಗೆ ಲಭ್ಯವಾಗದೇ ಇರಲು ಕಾರಣಗಳೇನು;

(ಇ) ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿ ಹಲವಾರು ತಿಂಗಳುಗಳೇ ಕಳೆದಿದ್ದರೂ ಹೊಸ ಪಡಿತರ ಚೀಟಿ ಲಭ್ಯವಾಗದಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಈ) ಹೊಸ ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಿ ಹಲವಾರು ತಿಂಗಳುಗಳಿಂದ ಕಾಯುತ್ತಿರುವ ಸದರಿ ಅರ್ಜಿದಾರರಿಗೆ ಯಾವ ಕಾಲಮಿತಿಯೊಳಗೆ ಹೊಸ ಪಡಿತರ ಚೀಟಿ ವಿತರಿಸಲಾಗುವುದು?

## ರಾಜ್ಯದಲ್ಲಿನ ಆಯುಷ್ ಇಲಾಖೆಯ ಆಸ್ಪತ್ರೆಗಳ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೨ (೪೮) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಆಯುಷ್ ಆಸ್ಪತ್ರೆಗಳಲ್ಲಿ ಒಳ ರೋಗಿಗಳಿಗೆ ದಾಖಲಾತಿ ವ್ಯವಸ್ಥೆ ಇದೆಯೇ; ಇದ್ದಲ್ಲಿ, ಎಲ್ಲೆಲ್ಲಿ ಮತ್ತು ವಾಸ್ತವವಾಗಿ ಸಾರ್ವಜನಿಕರಿಗೆ ಉಪಯೋಗವಾಗಿರುವ ಅಂಕಿ ಅಂಶಗಳ ಮಾಹಿತಿ ನೀಡುವುದು;

(ಆ) ಆಯುಷ್ ಇಲಾಖೆಯಲ್ಲಿ ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳಿಗೆ ಹುದ್ದೆ ಮತ್ತು ಜವಾಬ್ದಾರಿಗಳನ್ನು ರೂಪಿಸದೇ ಹೆಚ್ಚುವರಿಯಾಗಿ ಸ್ನಾತಕೋತ್ತರ ಭತ್ಯೆ ನೀಡಲಾಗುತ್ತಿದ್ದೆಯೇ; ನೀಡಿದ್ದಲ್ಲಿ, ಯಾವ ಮಾನದಂಡಗಳ ಆಧಾರದ ಮೇಲೆ ನೀಡಲಾಗಿದೆ ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು? (ಮಾಹಿತಿ ಒದಗಿಸುವುದು)

## ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿರುವ ಅವ್ಯವಸ್ಥೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೩ (೧೨೦) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಪ್ಪಳದ ಜಿಲ್ಲಾ ಆಸ್ಪತ್ರೆಯಲ್ಲಿ ಪ್ರಸಕ್ತ ವರ್ಷದಿಂದ ಸಾವಿನ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು)

(ಆ) ಜಿಲ್ಲಾ ಆಸ್ಪತ್ರೆಗಳಲ್ಲಿ ಇರಬೇಕಾದ ಒಟ್ಟು ಐಸಿಯು ಬೆಡ್‌ಗಳ ಸಂಖ್ಯೆ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಹೆಚ್ಚಿಸಲು ಎಷ್ಟು ಸಮಯ ಬೇಕಾಗಿದೆ; (ಮಾಹಿತಿ ನೀಡುವುದು)

(ಇ) ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಸಿಗದೆ ಖಾಸಗಿ ಆಸ್ಪತ್ರೆಗಳತ್ತ ರೋಗಿಗಳು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;

(ಈ) ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಶಸ್ತ್ರಚಿಕಿತ್ಸೆ ನೀಡಲು ತಿಂಗಳುಗಟ್ಟಲೆ ಕಾಯಿಸಿ ಶಸ್ತ್ರಚಿಕಿತ್ಸೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವೈದ್ಯಾಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು? (ಜಿಲ್ಲಾವಾರು ಮಾಹಿತಿ ನೀಡುವುದು)

## ರಾಜ್ಯದ ವಿದ್ಯಾರ್ಥಿಗಳಿಗೆ ನೀಟ್ ಪರೀಕ್ಷೆಯಿಂದ ಉಂಟಾದ ಅನ್ಯಾಯದ ಬಗ್ಗೆ

**ಶ್ರೀ ಐವನ್ ಡಿ' ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೪ (೫೪) ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ನೀಟ್ ಪರೀಕ್ಷೆಯಲ್ಲಿ ಉಂಟಾದ ಅಕ್ರಮದಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಆದ ತೊಂದರೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

(ಆ) ನೀಟ್ ಪರೀಕ್ಷೆಯ ಬದಲು ರಾಜ್ಯ ಸರ್ಕಾರವೇ ವೈದ್ಯಕೀಯ ವಿದ್ಯಾರ್ಥಿಗಳಿಗೆ ಅರ್ಹತೆ ಪರೀಕ್ಷೆಯನ್ನು ನಡೆಸಿ, ಮೆರಿಟ್ ಆಧಾರದಲ್ಲಿ ಸೀಟುಗಳನ್ನು ಹಂಚಿಕೆ ಮಾಡಲು ಇರುವ ತೊಂದರೆಗಳೇನು; ಈ ಬಗ್ಗೆ ಸರ್ಕಾರದ ನಿಲುವೇನು;

(ಇ) ಪಿ.ಜಿ ಸೀಟುಗಳಿಗೆ ಪರೀಕ್ಷೆ ನಡೆಸದೇ ವಿದ್ಯಾರ್ಥಿಗಳಿಗೆ ಉಂಟಾದ ತೊಂದರೆ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ; (ವಿವರ ನೀಡುವುದು)

(ಈ) ರಾಜ್ಯದಲ್ಲಿರುವ ಒಟ್ಟು ವೈದ್ಯಕೀಯ ಸರ್ಕಾರಿ (ಯುಜಿ) ಸೀಟುಗಳ ಸಂಖ್ಯೆ ಎಷ್ಟು; ಖಾಸಗಿ ಸೀಟುಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಉ) ರಾಷ್ಟ್ರ ಮಟ್ಟದಲ್ಲಿ ನಡೆಯುವ ನೀಟ್ ಪರೀಕ್ಷೆಯಿಂದ ರಾಜ್ಯದ ವಿದ್ಯಾರ್ಥಿಗಳಿಗೆ ಎಷ್ಟು ಹೆಚ್ಚುವರಿ ಸೀಟು ದೊರೆಯಲಿದೆ; (ವಿವರ ನೀಡುವುದು)

(ಊ) ನೀಟ್ ಪರೀಕ್ಷೆ ಮೂಲಕ ರಾಜ್ಯದ ವಿದ್ಯಾರ್ಥಿಗಳಿಗೆ ಕಡಿಮೆ ಸೀಟು ದೊರೆಯುತ್ತಿದೆ ಎಂಬ ವರದಿಗಳಿರುವುದು ನಿಜವೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

## MPM ಜಮೀನಿನಲ್ಲಿ ಬೆಳೆದಿರುವ EUCALYPTUS ಮರಗಳನ್ನು ನಾಶ ಮಾಡುವ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೫ (೯೪) ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳ ವ್ಯಾಪ್ತಿಯಡಿ ಬರುವ ಎಂ.ಪಿ.ಎಂ ಜಮೀನನ್ನು ಅರಣ್ಯ ಕ್ಷೇತ್ರವೆಂದು ಘೋಷಿಸಿದ್ದು, ಸದರಿ ಜಮೀನಿನಲ್ಲಿ ಬೆಳದಿರುವ Eucalyptus ಮರಗಳನ್ನು ನಾಶ ಮಾಡಬೇಕೆಂದು ನಿಯಮಗಳನ್ನು ರೂಪಿಸಿರುವುದು ನಿಜವೇ;

(ಆ) ಹಾಗಿದ್ದಲ್ಲಿ, ೨೦೦೯ನೇ ಸಾಲಿನಿಂದಲೂ ಸದರಿ ಮರಗಳನ್ನು ಕಡಿಯದೆ ಗಂಧದ ಮರಗಳು ಸೇರಿದಂತೆ ಇತರ ಮೌಲ್ಯಾಧಾರಿತ ಮರಗಳನ್ನು ಕಡಿದು ಕಳ್ಳಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)

## ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಿತರಿಸಿದ ವಸ್ತುಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬ (೨೧) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ನ್ಯಾಯ ಬೆಲೆ ಅಂಗಡಿಯ ಮೂಲಕ ಯಾವ ಯಾವ ವಸ್ತುಗಳನ್ನು ವಿತರಿಸಲಾಗುತ್ತದೆ; (ವಸ್ತುವಾರು ವಿವರ ನೀಡುವುದು)

(ಆ) ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ನ್ಯಾಯ ಬೆಲೆ ಅಂಗಡಿಯ ಮೂಲಕ ವಿತರಿಸಲು ಎಷ್ಟು ಪ್ರಮಾಣದಲ್ಲಿ ಯಾವ ಯಾವ ವಸ್ತುಗಳನ್ನು ಖರೀದಿಸಲಾಗುತ್ತದೆ; (ವಸ್ತುವಾರು ವಿವರ ನೀಡುವುದು)

(ಇ) ಈ ಇಲಾಖೆಯಿಂದ ನ್ಯಾಯ ಬೆಲೆ ಅಂಗಡಿಯ ಮೂಲಕ ವಿತರಿಸಲು ಸರ್ಕಾರವು ಖರೀದಿಸುವ ವಸ್ತುಗಳಿಗೆ ಪ್ರತಿ ಕೆ.ಜಿ. ಗೆ ನಿಗದಿಪಡಿಸಲಾದ ದರವೆಷ್ಟು? (ಸರಬರಾಜುದಾರರು ಮತ್ತು ಸಾಗಾಣಿಕೆದಾರರ ಹೆಸರು ಮತ್ತು ಸಂಪೂರ್ಣ ವಿವರದೊಂದಿಗೆ ವಸ್ತುವಾರು ವಿವರ ನೀಡುವುದು)

# ಪಶು ಬಳಕೆಯ ಔಷಧಿಗಳನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಿರುವ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೭ (೧೧೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು ಮನುಷ್ಯರ ಬಳಕೆಗೆ ಪಶುಗಳ ಔಷಧವನ್ನು ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಿ ಸಾರ್ವಜನಿಕರ ಜೀವನದ ಜೊತೆ ಚೆಲ್ಲಾಟವಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು;

(ಆ) ನಿಗಮವು ಸರ್ಕಾರಿ ಆಸ್ಪತ್ರೆಗಳಿಗೆ ಪಶುಗಳ ಬಳಕೆಯ ಯಾವ ಯಾವ ಔಷಧಿಗಳನ್ನು ಸರಬರಾಜು ಮಾಡಿರುತ್ತದೆ; ಔಷಧಗಳನ್ನು ಸರಬರಾಜು ಮಾಡಲು ಯಾವ ವರ್ಷದಲ್ಲಿ ಎಷ್ಟು ಮೊತ್ತದ ಟೆಂಡರ್‌ಅನ್ನು ಪಡೆದುಕೊಂಡಿತ್ತು; ನಿಗಮಕ್ಕೆ ಸದರಿ ಔಷಧಗಳನ್ನು ಯಾವ ಕಂಪನಿ ಸರಬರಾಜು ಮಾಡಿದೆ; ಅದರ ವಿರುದ್ಧ ಯಾವ ಕಾನೂನು ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ವಿವರ ನೀಡುವುದು)

(ಇ) ನಿಗಮಕ್ಕೆ ಸರಬರಾಜು ಮಾಡಿರುವ ಔಷಧಗಳನ್ನು ಔಷಧ ನಿಯಂತ್ರಣ ಇಲಾಖೆಯು ಔಷಧಗಳ ಗುಣಮಟ್ಟದ ಪರೀಕ್ಷೆಗೊಳಪಡಿಸಿದೆಯೇ; ಉತ್ತಮ ಗುಣಮಟ್ಟ ಹಾಗೂ ಗುಣಮಟ್ಟದ್ದಲ್ಲ ಎಂಬ ವರದಿ ಬಂದ ಔಷಧಗಳು ಯಾವುವು; ಉತ್ತಮ ಗುಣಮಟ್ಟದ್ದಲ್ಲದ ಔಷಧಗಳನ್ನು ಪೂರೈಸಿದ ಕಂಪನಿಯ ವಿರುದ್ಧ ತೆಗೆದುಕೊಂಡ ಕ್ರಮಗಳೇನು;

(ಈ) ಸರಬರಾಜುದಾರರನ್ನು ಕಪ್ಪುಪಟ್ಟಿಗೆ ಸೇರಿಸಲಾಗಿದೆಯೇ; ತಪ್ಪಿತಸ್ಥ ಅಧಿಕಾರಿಗಳು ಹಾಗೂ ಸಂಬಂಧಪಟ್ಟವರ ವಿರುದ್ಧ ಯಾವ ಕ್ರಮಗಳನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ? (ಸಂಪೂರ್ಣ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಉಲ್ಬಣಗೊಂಡಿರುವ ಡೆಂಗ್ಯೂ ಪ್ರಕರಣಗಳ ಕುರಿತು

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

೮ (೫೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಈವರೆಗೆ ಒಟ್ಟು ಎಷ್ಟು ಡೆಂಗ್ಯೂ ಪ್ರಕರಣಗಳು ಕಂಡು ಬಂದಿವೆ; (ಜಿಲ್ಲಾವಾರು ವಿವರ ನೀಡುವುದು)

(ಆ) ಡೆಂಗ್ಯೂ ನಿಯಂತ್ರಣಕ್ಕೆ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ;

(ಇ) ಡೆಂಗ್ಯೂ ಬಂದಿರುವ ರೋಗಿಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಯಾವ ರೀತಿಯ ಚಿಕಿತ್ಸೆ ನೀಡಲಾಗುತ್ತಿದೆ;

(ಈ) ಡೆಂಗ್ಯೂ ಜ್ವರದಿಂದ ಮರಣ ಹೊಂದಿದವರ ಸಂಖ್ಯೆ ಎಷ್ಟು ಹಾಗೂ ಪ್ರಸ್ತುತ ಐ.ಸಿ.ಯು ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

## ಕಲ್ಯಾಣ ಕರ್ನಾಟಕದಲ್ಲಿ ಶಿಕ್ಷಕರ ಕೊರತೆ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೯ (೬೧) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ೧೯ ಸಾವಿರಕ್ಕಿಂತ ಹೆಚ್ಚು ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಭಾಗದಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು ೩೭೧ (ಜೆ) ಅಡಿಯಲ್ಲಿ ಹುದ್ದೆ ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳದಿರಲು ಕಾರಣಗಳೇನು;

(ಇ) ಪ್ರತಿ ವರ್ಷ ಈ ಭಾಗದ ಜಿಲ್ಲೆಗಳು ಎಸ್.ಎಸ್.ಎಲ್.ಸಿ/ಪಿಯುಸಿ ಪರೀಕ್ಷೆಗಳ ಫಲಿತಾಂಶದಲ್ಲಿ ಕೊನೆಯ ಸ್ಥಾನ ಪಡೆಯುತ್ತಿದ್ದು, ಇದಕ್ಕೆ ಶಿಕ್ಷಕರ ಕೊರತೆ ಕಾರಣವಲ್ಲವೇ; ಗುಣಮಟ್ಟದ ಶಿಕ್ಷಣ ನೀಡಲು ಸರ್ಕಾರವು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ;

(ಈ) ಶಿಕ್ಷಣದ ಗುಣಮಟ್ಟ ಮತ್ತು ಶಿಕ್ಷಕರ ನೇಮಕಾತಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ಪಾತ್ರವೇನು?

## ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಸ್ಥಾಪನೆ ಬಗ್ಗೆ

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) –**

೧೦ (೩೧) ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೇಂದ್ರ ಸರ್ಕಾರ ಪ್ರಧಾನಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ ಅಡಿ ವಿವಿಧ ರಾಜ್ಯಗಳಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಗಳನ್ನು ಸ್ಥಾಪಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲೂ ಅಖಿಲ ಭಾರತ ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆಯೇ; ಹಾಗಿದ್ದಲ್ಲಿ, ಈ ಪ್ರಸ್ತಾವನೆ ಯಾವ ಹಂತದಲ್ಲಿದೆ; (ಪೂರ್ಣ ಮಾಹಿತಿ ನೀಡುವುದು)

(ಇ) ರಾಜ್ಯದ ರಾಯಚೂರು ನಗರದಲ್ಲಿ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ ಸ್ಥಾಪನೆ ಬಗ್ಗೆ ರಾಯಚೂರು ಜಿಲ್ಲೆಯ ನಾಗರಿಕರು ನಿರಂತರ ಸತ್ಯಾಗ್ರಹ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ವಹಿಸಿರುವ ಕ್ರಮಗಳು ಯಾವುವು?

## ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಹೆಚ್ಚಾಗಿರುವ ಬಗ್ಗೆ

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) –**

**ಹಾಗೂ**

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧ (೧೨+೧೯) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಳೆದ ಅಧಿವೇಶನದ ಸಂದರ್ಭದಲ್ಲಿ ಸುದೀರ್ಘ ಚರ್ಚೆಗೆ ಕಾರಣವಾದ ಹೆಣ್ಣು ಭ್ರೂಣ ಹತ್ಯೆ ಪ್ರಕರಣ ಕುರಿತಂತೆ ಸರ್ಕಾರ ನೇಮಿಸಿದ್ದ ಸಿ.ಓ.ಡಿ ತನಿಖೆಯು ಯಾವ ಹಂತದಲ್ಲಿದೆ; ತನಿಖೆ ಮುಕ್ತಾಯಗೊಂಡು ವರದಿ ನೀಡಿದ್ದಲ್ಲಿ, ವರದಿಯ ಪ್ರಮುಖಾಂಶಗಳೇನು;

(ಆ) ರಾಜ್ಯದಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಅವ್ಯಾಹತವಾಗಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಒಂದು ವರ್ಷದಿಂದ ಎಷ್ಟು ಭ್ರೂಣ ಹತ್ಯೆ ಪ್ರಕರಣಗಳು ನಡೆದಿದೆ; (ಜಿಲ್ಲಾವಾರು ಸಮಗ್ರ ವಿವರ ನೀಡುವುದು)

(ಇ) ಭ್ರೂಣ ಹತ್ಯೆ ಪ್ರಕರಣಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ದೂರುಗಳೆಷ್ಟು; ಬಂಧಿತರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಈ) ಪ್ರಕರಣದಲ್ಲಿ ಶಾಮೀಲಾಗಿರುವ ಸರ್ಕಾರಿ ಅಧಿಕಾರಿ/ನೌಕರರು ಯಾರು; ಅವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು; (ನೌಕರರ ಹುದ್ದೆ ಸಹಿತ ವಿವರ ನೀಡುವುದು) ಭ್ರೂಣ ಹತ್ಯೆ ಮಾತ್ರೆ (ಎಂಟಿಪಿ ಕಿಟ್) ಔಷಧ ಅಂಗಡಿಗಳಲ್ಲಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿದ್ದು, ಕಿಟ್ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಎಷ್ಟು ಔಷಧ ಅಂಗಡಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ;

(ಉ) ಜಾಮೀನು ಪಡೆದು ಜೈಲಿನಿಂದ ಹೊರಬಂದವರು ಮತ್ತೆ ಭ್ರೂಣ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸದಿರಲು ಕಾರಣವೇನು; ಹೆಣ್ಣು ಭ್ರೂಣ ಹತ್ಯೆ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ರಾಜ್ಯದ ಎಲ್ಲಾ ಎಸ್ಕಾಂಗಳ ಸ್ಥಿತಿಗತಿ ಕುರಿತು

**ಶ್ರೀ ಶರವಣ ಟಿ.ಎ (ವಿಧಾನಸಭೆಯಿಂದ ಚುನಾಯಿತರಾದವರು) –**

೧೨ (೧೨೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಗೃಹಜ್ಯೋತಿ ಯೋಜನೆಯಡಿಯಲ್ಲಿ ೨೦೦ ಯೂನಿಟ್ ಉಚಿತ ವಿದ್ಯುತ್ ಪಡೆಯಲು ನೋಂದಾಯಿಸಿಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ೨೦೨೩–೨೪ ಹಾಗೂ ೨೦೨೪–೨೫ನೇ ಸಾಲಿನಲ್ಲಿ ಈ ಯೋಜನೆಯಡಿ ಬಳಕೆಯಾದ ವಿದ್ಯುತ್ ಪ್ರಮಾಣವೆಷ್ಟು (No. of Unit); (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸರ್ಕಾರವು ಎಲ್ಲಾ ಎಸ್ಕಾಂಗಳಿಗೆ ಪಾವತಿಸಿದ ಮೊತ್ತವೆಷ್ಟು, ಹಾಗೂ ಪಾವತಿಗೆ ಬಾಕಿ ಇರುವ ಮೊತ್ತವೆಷ್ಟು; (ಎಸ್ಕಾಂವಾರು ಮಾಹಿತಿ ನೀಡುವುದು)

(ಈ) ಬಾಕಿ ಮೊತ್ತವನ್ನು ಪಾವತಿಸದೆ ಇರುವ ಕಾರಣ ಎಸ್ಕಾಂಗಳು ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

## ಸಾರವರ್ಧಿತ (Fortified) ಆಹಾರ ಪದಾರ್ಥಗಳ ಕುರಿತು

**ಡಾ: ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩ (೧೪೮) ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಪ್ರಸ್ತುತ ಕರ್ನಾಟಕ ಸರ್ಕಾರದಡಿ ಸಾರವರ್ಧಿತ ಆಹಾರ ಪದಾರ್ಥಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆ (PDS) NFSA ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆಯೇ; ಇದ್ದಲ್ಲಿ, ಇದುವರೆಗೂ ಯಾವ ಆಹಾರ ಪದಾರ್ಥಗಳನ್ನು ವಿತರಿಸಲಾಗಿದೆ; (ಕಳೆದ ಮೂರು ವರ್ಷಗಳ ಪ್ರಮಾಣವಾರು, ಜಿಲ್ಲಾವಾರು ಮತ್ತು ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಸಾರವರ್ಧಿತ ಆಹಾರ ಪದಾರ್ಥಗಳಲ್ಲಿ ಯಾವ ಯಾವ ವಿಟಮಿನ್‌ಗಳನ್ನು ಒದಗಿಸಲಾಗುತ್ತಿದೆ; ಒದಗಿಸುವ ವಿಟಮಿನ್‌ಗಳಲ್ಲಿ B12 ವಿಟಮಿನ್ ಒದಗಿಸಲಾಗುತ್ತಿದೆಯೇ; ಇಲ್ಲವಾದಲ್ಲಿ, ಪ್ರಸಕ್ತ ಸಾಲಿನಲ್ಲಿ B12 ವಿಟಮಿನ್ ಒದಗಿಸಲು ಕ್ರಮ ಕೈಗೊಳ್ಳಲಾಗುವುದೆ;

(ಇ) ಸಾರವರ್ಧಿತ ಆಹಾರ ಪದಾರ್ಥಗಳಿಗೆ ಸರ್ಕಾರ ಒದಗಿಸಿರುವ ಅನುದಾನ ಕುರಿತ ಮಾಹಿತಿ ಒದಗಿಸುವುದು; ಈ ಕಾರ್ಯಕ್ರಮಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ನೀಡಲಾಗುತ್ತಿದೆಯೇ; ನೀಡುತ್ತಿದ್ದಲ್ಲಿ, ಈವರೆಗೆ ಎಷ್ಟು ಅನುದಾನ ಒದಗಿಸಲಾಗಿದೆ; (ವರ್ಷಾವಾರು ಮಾಹಿತಿ ನೀಡುವುದು)

(ಈ) ಸಾರವರ್ಧಿತ ಆಹಾರ ಪದಾರ್ಥಗಳಿಂದ ಫಲಾನುಭವಿಗಳಿಗೆ ಆಗುವ ಅನುಕೂಲಗಳ ಬಗ್ಗೆ ಫಲಾನುಭವಿಗಳಿಗೆ ಅರಿವು ಮೂಡಿಸುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಇಲ್ಲವಾದಲ್ಲಿ, ಪ್ರಸಕ್ತ ಸಾಲಿನಲ್ಲಿ ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದೇ?

## ರಾಜ್ಯದಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೪ (೭೦) ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಹೊಸ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಇರುವ ನಿಯಮಗಳು ಯಾವುವು; ಪ್ರಸ್ತುತ ಕರ್ನಾಟಕದಲ್ಲಿ ಹೊಸ ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆಯೇ; ಹೊಂದಿದ್ದಲ್ಲಿ, ರಾಜ್ಯದ ಎಲ್ಲೆಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಎಷ್ಟು ಪ್ರಸ್ತಾವನೆಗಳು ಯಾವ ಹಂತದಲ್ಲಿ ಸರ್ಕಾರದ ಮುಂದಿವೆ; (ಮಾಹಿತಿ ನೀಡುವುದು)

(ಆ) ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲು ಅಗತ್ಯವಿರುವ ಮೂಲಭೂತ ಸೌಕರ್ಯಗಳು ಯಾವುವು ಹಾಗೂ ಪೂರೈಸಬೇಕಾದ ಷರತ್ತುಗಳು ಯಾವುವು; ಎಷ್ಟು ವಿಸ್ತೀರ್ಣದ ಭೂಮಿಯ ಅಗತ್ಯವಿದೆ; ಇತರ ಯಾವ ಯಾವ ಮೂಲಭೂತ ಸೌಕರ್ಯಗಳ ಲಭ್ಯತೆ ಮತ್ತು ಮಾನದಂಡಗಳನ್ನು ಆಧರಿಸಿ ಈ ಕಾಲೇಜುಗಳನ್ನು ಪ್ರಾರಂಭಿಸಲು ಪರಿಗಣಿಸಲಾಗುತ್ತಿದೆ; (ಮಾಹಿತಿ ನೀಡುವುದು)

(ಇ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಇವೆಯೇ; ಯಾವ ಜಿಲ್ಲೆಗಳಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಇರುವುದಿಲ್ಲ ಹಾಗೂ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಇಲ್ಲದ ಜಿಲ್ಲೆಗಳಲ್ಲಿ ಕಾಲೇಜು ಪ್ರಾರಂಭಿಸುವ ಉದ್ದೇಶಗಳನ್ನು ಸರ್ಕಾರ ಹೊಂದಿದೆಯೇ; (ವಿವರ ನೀಡುವುದು)

(ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹೊಸ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಹೊಸ ವೈದ್ಯಕೀಯ ಕಾಲೇಜುಗಳನ್ನು ಎಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ; ಈ ಪ್ರಕ್ರಿಯೆ ಯಾವ ಹಂತದಲ್ಲಿದೆ? (ಸಂಪೂರ್ಣ ವಿವರ ನೀಡುವುದು)

## ಸರ್ಕಾರಿ ಶಾಲೆಗಳ ಸಮಸ್ಯೆ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೫ (೦೪) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:–

(ಅ) ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಹಲವಾರು ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಶಾಲೆಗಳಿಗೆ ಉತ್ತಮ ಮೂಲಭೂತ ಸೌಕರ್ಯಗಳ ಕೊರತೆ, ಶಿಕ್ಷಕರ ಕೊರತೆ, ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆ ಮತ್ತು ಇತ್ಯಾದಿಗಳ ಕೊರತೆ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

(ಇ) ಇದ್ದಲ್ಲಿ, ಸರ್ಕಾರದ ವತಿಯಿಂದ ಈ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು;

(ಈ) ರಾಜ್ಯದ ಕನ್ನಡ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಉನ್ನತೀಕರಣಗೊಳಿಸಲು ಹಾಗೂ ಹೊಸ ಕನ್ನಡ ಮಾಧ್ಯಮದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು;

(ಉ) ಸರ್ಕಾರದ ವತಿಯಿಂದ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತರಲು ಕ್ರಮಕೈಗೊಂಡಿದ್ದು, ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ಮತ್ತು ಈ ನೀತಿಯನ್ನು ರಾಜ್ಯದಲ್ಲಿ ಜಾರಿಗೆ ತರಲು ಕೇಂದ್ರ ಸರ್ಕಾರವು ಅನುಮತಿ ನೀಡಿದೆಯೇ?

**ಕೆ.ಆರ್. ಮಹಾಲಕ್ಷ್ಮಿ**

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಕಾಸೂ-217 400ಪ್ರತಿಗಳು (ಪಿ6)

**List of Questions for Oral Answers**

**Total No. of Questions - 15**

# LIST - 01

# KARNATAKA LEGISLATIVE COUNCIL

## ONE HUNDRED AND FIFTY THIRD SESSION

## Monday, the 15th July, 2024

**GROUP - I**

1. Minister for Food and Civil Supplies and Consumer Affairs
2. Minister for Energy
3. Minister for Health and Family Welfare
4. Minister for Forest, Ecology and Environment
5. Minister for Medical Education and Skill Development
6. Minister for Primary and Secondary Education
7. Minister for Higher Education

### REGARDING NEW RATION CARD

**Sri Prathap Simha Nayak K. (Elected by Legislative Assembly)-**

1(136) Will the Minister for Food and Civil Supplies and Consumer Affairs be pleased to state:-

a) whether it has come to notice of the Government that severe hardship is being faced by the applicants due to not available of new ration card to them till date even though several months have been elapsed by submitting application for new ration card by thousands of people in the State;

b) if so, the reasons for not available of new ration card to them till date;

c) the number of persons who have not received new ration card even though several months have been elapsed by submitting application for new ration card; (districtwise details be furnished)

d) the timelimit within which the new ration card would be distributed for the said applicants who are waiting from several months by submitting application for new ration card?

## AYUSH HOSPITALS IN THE STATE

**Sri P.H.Pujar (Local Authorities Constituency) -**

2 (48) Will the Minister for Health and Family Welfare be pleased to state:-

a) whether there is an admission facility for inpatients in the taluk and district level Ayush hospitals of the State; if so, the details of the places where these are located and the information of statistics that have been actually utilized for public be furnished;

b) whether the post graduation allowance is being provided additionally to the doctors who are working already in Ayush department without creating the post and framing the responsibilities; if so, the particulars of basis of criteria on which it has been provided and the steps taken by the Government in this regard? (information be furnished)

## CHAOS IN KOPPAL DISTRICT HOSPITAL

**Smt. Hemalatha Nayak (Elected by Legislative Assembly) -**

3 (120) Will the Minister for Health and Family Welfare be pleased to state:-

a) whether it has come to the notice of the Government that the number of death is being increased in district hospital, Koppal during the current year; if so, steps taken by the Government; (details be furnished)

b) whether it has come to the notice of the Government that there are fewer I.C.U beds than the required in the district hospitals; if so, the timelimit within which

the same would be increased; (information be furnished)

c) whether it has come to the notice of the Government that the patients are going towards private hospitals without getting the treatment in the Government hospitals; if so, the steps taken by the Government in this regard;

d) whether it has come to the notice of the Government that patients are made to wait for several months for surgery in the Government hospitals and without providing surgery facility; if so, the action taken by the Government against the medical officers? (districtwise information be furnished)

## INJUSTICE TO STATE STUDENTS FROM NEET EXAMINATION

**Sri Ivan D'Souza (Elected by Legislative Assembly) -**

4 (54) Will the Minister for Medical Education and Skill Development be pleased to state:-

a) the steps taken by the Government to redress the hardships that have been caused to the students of the State due to the malpractice in the NEET exam;

b) the prevailing obstacles to conducting eligibility exam for medical students and to allocate seats on the basis of merit, instead of NEET exam by the State Government; the stand of the Government in this regard;

c) whether the steps has been taken by the Government with regard to inconvenience caused to the students without conducting the examination for PG seats; (details be furnished)

d) the total number of Government medical (UG) seats in the State; the number of private seats; (details be furnished)

e) the number of additional seats that will be available to students of the State from the national level NEET examination; (details be furnished)

f) there are reports that the students of the State are getting fewer seats from the NEET examination, the steps taken by the Government in this regard?

## DESTRUCTION OF EUCALYPTUS TREE

**Smt. Balkhees Banu (Elected by Legislative Assembly) -**

5 (94) Will the Minister for Forest, Ecology and Environment be pleased to state:-

a) MPM land has been declared as forest area which are coming under the limits of Shivamogga, Chikkamagaluru and Uttara Kannada districts, whether it is true that the rules have been framed for the destruction of eucalyptus trees that have been grown in the said land;

b) if so, whether it has come to the notice of the Government that the smuggling is being taken place by cut- down the sandalwood trees along with other valuable trees instead of not cut-down eucalyptus tree from 2009; if so, the action taken by the Government in this regard? (details be furnished)

## ITEMS DISTRIBUTED BY THE FOOD AND CIVIL SUPPLIES DEPARTMENT

**Sri N. RaviKumar (Elected by Legislative Assembly) -**

6 (21) Will the Minister for Food and Civil Supplies and Consumer Affairs be pleased to state:-

a) the particulars of items which are being distributed through the fair price shops by the Food and Civil Supplies and Consumer Affairs department; (itemswise details be furnished)

b) the quantum of various items that are being purchased to distribute through the fair price shops by the Food and Civil Supplies and Consumer Affairs department; (itemswise details be furnished)

c) the details of the price that has been fixed for every KG of items to be purchased by the Government for the distribution through Fair Price Shop by this department?

(itemswise details alongwith name and complete details of distributers and suppliers be furnished)

## SUPPLIED VETERINARY DRUGS TO GOVERNMENT HOSPITALS

**Sri Chalavadi T. Narayanaswamy (Elected by Legislative Assembly) -**

7 (111) Will the Minister for Health and Family Welfare be pleased to state:-

a) whether it has come to the notice of the Government that the Karnataka State Medical Supplies Corporation Limited has been splurged with the life of public by supplying veterinary drugs to the Government hospitals for human use; if so, the actions taken by the Government;

b) the particulars of veterinary purpose drugs that have been supplied by the corporation to Government hospitals; the year and the amount of tender that has been awarded to supply the drugs; the particulars of the company from which the said drug has been supplied to the corporation; the particulars of legal action taken against them; (complete details be furnished)

c) whether the standard of medicines that have been supplied to the corporation has been tested by the drug control department; the particulars of drugs which have reported as standards and sub-standard; the actions taken against company which has supplied sub-standard drugs;

d) whether the suppliers have been blacklisted; the decision that has been taken to initiate the actions against the culprit officers and concerned persons? (complete information be furnished)

## INCREASE IN DENGUE CASES IN THE STATE

**Dr.Dhananjaya Sarji (Graduates' Constituency) -**

8 (51) Will the Minister for Health and Family Welfare be pleased to state:-

a) the total number of dengue cases that have been reported in the State so far; (districtwise details be furnished)

b) the particulars of steps taken by the Government to control the dengue;

c) the kind of treatment that is being provided in the Government and private hospitals for the patients who have been infected from dengue;

d) the number of people who have succumbed due to dengue fever and the number of patients who are getting treatment in I.C.U at present? (districtwise details be furnished)

## SHORTAGE OF TEACHERS IN KALYANA KARNATAKA

**Dr.Talwar Sabanna (Nominated) -**

9 (61) Will the Minister for Primary and Secondary Education be pleased to state:-

a) whether it has come to the notice of the Government that there is a shortage of more than 19 thousand teachers in primary and secondary schools in the districts of Kalyana Karnataka;

b) the reasons for not taking steps by the Government to fill up the posts under 371(J) to fulfill the shortage of teachers in this region;

c) every year the districts of this region are getting last place in the result of S.S.L.C/P.U.C examinations whether it is because of shortage of teachers there of; the steps that have been taken by the Government to provide quality education;

d) the role of Kalyana Karnataka Development Board (KKRDB) in the quality education and recruitment of teachers?

## ESTABLISHMENT OF ALL INDIA INSTITUTE OF MEDICAL SCIENCES IN THE STATE

**Sri K.A. Thippeswamy (Nominated) -**

10 (31) Will the Minister for Medical Education and Skill Development be pleased to state:-

a) whether it has come to the notice of the Government that All India Institute of Medical Sciences are being established by the Central Government in various States under Pradhan Mantri Swasthya Suraksha yojana; if so, the particulars of steps taken by the Government to establish All India Institute of Medical Sciences also in the State; complete information be furnished;

b) whether State Government has submitted a proposal to the Central Government to establish All India Institute of Medical Sciences in the State; if so, the present stage of this proposal;(complete information be furnished)

c) whether it has come to the notice of the Government that the continuous agitation is being carried out by the people of Raichur with regard to the establishment All India Institute of Medical Sciences in Raichur city of the State; if so, the particulars of measures taken by the Government?

## FEMALE FOETICIDE CASES IN THE STATE

**Sri U.B. Venkatesh (Nominated) -**

**Sri C.T.Ravi (Elected by Legislative Assembly) -**

11 (12+19) Will the Minister for Health and Family Welfare be pleased to state:-

a) the present stage of C.I.D investigation that has been appointed by the Government with regard to female foeticide case that led to lengthy discussion during the last session in the State; if the report has been submitted by completing the investigation, the highlights of the report there of;

b) whether it has come to the notice of the Government that female foeticide cases have been occurred rampantly in the State; the number of foeticide cases that have been occurred during the last one year; (districtwise complete details be furnished)

c) the number of cases that have been lodged with regard to foeticide cases; the number of persons who have been arrested; (details be furnished)

d) the details of the Government officer/employee who have been colluded in the case; the action that has been taken against them; (details along with designation of the employees be furnished) medical termination of pregnancy (MTP) kit is being sold in drug stores in the black market, the number of drug stores against which the action has been taken on the allegation of sale of the kit;

e) whether it has come to the notice of the Government that the persons who have been on bail and again involving in the foeticide case; if so, the reasons for not taking any stringent action against the culprit by the Government; the measures taken by the Government to avoid the female foeticide?

## STATUS OF ALL ESCOMS OF THE STATE

**Sri Sharavana T.A. (Elected by Legislative Assembly) -**

12 (129) Will the Minister for Energy be pleased to state:-

a) the number of beneficiaries who have registered for getting 200 unit free electricity under Gruha Jyothi Scheme in the State; (districtwise information be furnished)

b) the quantum of electricity consumption (No. of units) under this scheme during the year 2023- 2024 and 2024- 2025; (districtwise information be furnished)

c) the amount that has been paid by the Government for all escoms and the outstanding amount for the same; (escomswise information be furnished)

d) whether it has come to the notice of the Government that escoms are in distressed condition due to the reasons for non payment of outstanding amount; the measures taken by the Government to release the outstanding amount?

## REGARDING FORTIFIED FOOD

**Dr. Yathindra S (Elected by Legislative Assembly) -**

13 (148) Will the Minister for Food and Civil Supplies and Consumer Affairs be pleased to state:-

a) whether the fortified food grains are being distributed to beneficiaries under National Food Security Act (NFSA) through the public distribution system (PDS) by the Government of Karnataka at present; if so, the particulars of food that have been distributed so far; (quantitywise, districtwise and constituencywise information during the last three years be furnished)

b) the particulars of vitamins that are being provided in the fortified food; whether vitamin B12 is being provided in the vitamins which have been distributed to them; if not, whether the steps would be taken to provide the vitamin B12 during the current year;

c) the information of grant that has been provided by the State Government to fortified food be furnished; whether the grant is being provided by the Central Government for these programmes; if so, the grant that has been provided so far; (yearwise information be furnished)

d) the measures taken by the Government to create the awareness to the beneficiaries with regard to benefits for beneficiaries from the fortified food; if not, whether the awareness programmes would be chalked out during the current year?

## ESTABLISHMENT OF NEW MEDICAL COLLEGES IN THE STATE

**Sri Manjunatha Bhandari (Local Authorities Constituency)-**

14 (70) Will the Minister for Medical Education and Skill Development be pleased to state:-

a) details of the prevailing rules to establish new Government medical colleges in the State; whether there is a intention of the Government to establish new Government medical colleges in Karnataka at present; if so, the places of the State and the number of proposals which are before the Government to establish the Government medical colleges; (information be furnished)

b) the particulars of required infrastructure to establish new medical colleges and the particulars of conditions to obey the same; details of the total extent of land which is required; details of the availability of various other infrastructure and the criteria based on which the consideration is being taken place for the commencement of the said colleges; (information be furnished)

c) whether there are Government medical colleges in all districts of the State; the particulars of districts in which there are no Government medical colleges and whether there is an intention before the Government to establish the colleges in the districts without Government medical colleges; (details be furnished)

d) whether the proposal is before the Government to establish new medical colleges in Dakshina Kannada and Udupi district; if so, the places where the Government has been intended to establish new medical colleges; the present stage of the same? (complete details be furnished)

## PROBLEM OF GOVERNMENT SCHOOLS

**Sri Nagaraju M. (Elected by Legislative Assembly) -**

15 (04) Will the Minister for Primary and Secondary Education be pleased to state:-

a) whether it has come to the notice of the Government that there is a shortage of various infrastructure in the Government schools of the Sate;

b) if so, whether the Government has focused about the shortage of good infrastructure, teachers, supply of pure drinking water etc's in higher primary and lower primary schools;

c) if so, the measures taken by the Government to resolve the same;

d) the particulars of measures taken by the Government to upgrade the kannada medium primary and secondary schools and to commence the new kannada medium primary and secondary schools in the State;

e) the step has been taken by the Government to implement the State education policy, the present stage of this process and whether the permission has been accorded by the Central Government to implement the same in the State?

**K.R. MAHALAKSHMI**
Secretary
Karnataka Legislative Council

Government Press. Vikasa Soudha Unit. Bengaluru. WD- 217 - Copies